ಕುಂದಾಪುರಕ್ಕೆ ಅಸಿಸ್ಟೆಂಟ್ ಗವರ್ನಮೆಂಟ್ ಪ್ಲೀಡರ್ ನೇಮಕ ಮಾಡುವ ಬಗ್ಗೆ

೪೪೮ ಶ್ರೀ ಜಿ. ಎಸ್. ಆಚಾರ್ (ಬೈಂದೂರು) ಮಾನ್ಯ ಕಾನೂನು ಮಂತ್ರಿ ಸಂಸದೀಯ ವ್ಯವಹಾರಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) (೧) ಕುಂದಾಪುರದಲ್ಲಿ ಮುನ್ಸೀಫ್ ಮ್ಯಾಜಿಸ್ಟ್ರೇಟರ್‌ರವರ ಎರಡು ಕೋರ್ಟುಗಳಿರುವುದು ನಿಜವಲ್ಲವೇ?

೨) ಅಲ್ಲಿ ಸಹಾಯಕ ವಕೀಲರವರ ಹುದ್ದೆ ಕಳೆದ ಒಂದು ವರ್ಷದಿಂದಲೂ ಖಾಲಿ ಇದ್ದು ಇದರಿಂದಾಗಿ ಸಾರ್ವಜನಿಕರಿಗೆ ತೊಂದರೆ ಆಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ

ಆ) ಹಾಗಿದ್ದಲ್ಲಿ ಸದರಿ ಹುದ್ದೆಯನ್ನು ಭರ್ತಿ ಮಾಡಲು ಸರ್ಕಾರದವರು ಕೈಗೊಂಡ ಕ್ರಮಗಳೇನು

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು).—

ಅ) (೧) ಹೌದು.

೨) ಕುಂದಾಪುರದ ಸಹಾಯಕ ಸರ್ಕಾರಿ ವಕೀಲರ ರಾಜೀನಾಮೆಯನ್ನು ೨೧-೭-೧೯೮೬ರಿಂದ ಜಾರಿಗೆ ಬರುವಂತೆ ಒಪ್ಪಲಾಯಿತು. ಕುಂದಾಪುರದ ಸಹಾಯಕ ಸರ್ಕಾರಿ ವಕೀಲರ ರಾಜೀನಾಮೆಯನ್ನು ಒಪ್ಪಿದ ದಿನಾಂಕದಿಂದಲೇ ಕುಂದಾಪುರದ ಸಹಾಯಕ ಪಬ್ಲಿಕ್ ಪ್ರಾಸಿಕ್ಯೂಟರ್‌ರವರು ಕುಂದಾಪುರದ ಮುನ್ಸೀಫ್ ನ್ಯಾಯಾಲಯದಲ್ಲಿ ಸರ್ಕಾರದ ಸಿವಿಲ್ ವ್ಯಾಜ್ಯಗಳ ಪ್ರಕರಣಗಳನ್ನು ನಡೆಸುತ್ತಿದ್ದುದರಿಂದ ಸಾರ್ವಜನಿಕರಿಗೆ ತೊಂದರೆಯಾಗಿರುವುದಿಲ್ಲ.

ಆ) ಕುಂದಾಪುರದ ಸರ್ಕಾರಿ ಸಹಾಯಕ ವಕೀಲರನ್ನು ನೇಮಿಸುವ ಆದೇಶವನ್ನು ಹೊರಡಿಸಲಾಗಿದೆ.

ತಾಲ್ಲೂಕುಗಳಲ್ಲೊಂದು ಜನರಲ್ ಆಸ್ಪತ್ರೆ ಪ್ರಾರಂಭಿಸುವ ಬಗ್ಗೆ

೪೪೯ ಶ್ರೀ ಆರ್. ರಾಮಯ್ಯ (ಹಿರಿಯೂರು) ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರತಿ ತಾಲ್ಲೂಕು ಕೇಂದ್ರುಗಳಲ್ಲಿ ಸಾರ್ವತ್ರಿಕ ಆಸ್ಪತ್ರೆಯನ್ನು ಪ್ರಾರಂಭಿಸಲು ಸರ್ಕಾರದವರು ತೀರ್ಮಾನಿಸಿದಂತೆ ಈವರೆಗೆ ರಾಜ್ಯಾದ್ಯಂತ ಎಷ್ಟು ತಾಲ್ಲೂಕುಗಳಲ್ಲಿ ಪ್ರಾರಂಭವಾಗಿವೆ?

ಆ) ಇದಕ್ಕೆ ಇರುವ ನಿಯಮಾವಳಿಗಳೇನು. ಹಾಗೆ ಮಂಜೂರಾತಿ ಪಡೆದವುಗಳಿಗೆಲ್ಲ ಈ ನಿಯಮಾವಳಿಗಳು ಕಟ್ಟುನಿಟ್ಟಾಗಿ ಪಾಲನೆಯಾಗಿವೆಯೇ?

ಇ) ಹಿರಿಯೂರು ನಗರದಲ್ಲಿ ೩೫,೦೦೦ ಜನ ಸಂಖ್ಯೆ ಇದ್ದು ಗ್ರಾಮಾಂತರದಿಂದ ೧.೫೦ ಲಕ್ಷ ಜನಸಂಖ್ಯೆ ಇರುವಾಗ ಸಾರ್ವತ್ರಿಕ ಆಸ್ಪತ್ರೆ ಇಲ್ಲದಿರುವುದರಿಂದ ಆಲ್ಲಿನ ಜನತೆಗಾಗುತ್ತಿರುವ ತೊಂದರೆಯು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಈ) ೧೯೮೩ರಲ್ಲಿ ಆರೋಗ್ಯ ಮಂತ್ರಿಗಳು ಹಿರಿಯೂರಿಗೆ ಭೇಟಿ ನೀಡಿದಾಗ ಹಿರಿಯೂರು ನಗರದ ಜನತೆಗೆ ಸಾರ್ವತ್ರಿಕ ಆಸ್ಪತ್ರೆಯನ್ನು ಮಂಜೂರು ಮಾಡಿರುವುದಾಗಿ ಘೋಷಿಸಿರುವುದು ಅದರ ಹಿಂದಿನ ದಿನವೇ ಪತ್ರಿಕೆಗಳಲ್ಲಿ ಹಿರಿಯೂರಿಗೆ ಸಾರ್ವತ್ರಿಕ ಆಸ್ಪತ್ರೆ ಮಂಜೂರು ಮಾಡಿರುವುದಾಗಿ ಮುಖ್ಯಮಂತ್ರಿಗಳು ಹೇಳಿಕೆ ನೀಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಉ) ಹಾಗಿದ್ದಲ್ಲಿ ಇದು ಕಾರ್ಯಗತ ಮಾಡುವಲ್ಲಿ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಊ) ಹಾಗಿಲ್ಲದಿದ್ದಲ್ಲಿ ಇದು ಕಾರ್ಯಗತವಾಗದೇ ಇರುವುದಕ್ಕೆ ಕಾರಣಗಳೇನು?

ಶ್ರೀ ಬಿ. ರಾಚಯ್ಯ (ಆರೋಗ್ಯ ಮಂತ್ರಿಗಳು).—

ಅ) ೧೭ ತಾಲ್ಲೂಕು ಮಟ್ಟದ ಆಸ್ಪತ್ರೆಗಳು ಪ್ರಾರಂಭವಾಗಿವೆ. ಇದರ ಜೊತೆಗೆ ೪೨ ತಾಲ್ಲೂಕು ಮಟ್ಟದ ಆಸ್ಪತ್ರೆಗಳಿಗೆ ೩೦.೫೦ ಹಾಸಿಗೆಗಳ ಸಾರ್ವಜನಿಕ ಆಸ್ಪತ್ರೆಯಾಗಿ ಮೇಲ್ದರ್ಜೆಗೇರಿಸಿ ಕಟ್ಟಡದ ಕಾರ್ಯ ವಿವಿಧ ಹಂತಗಳಲ್ಲಿರುತ್ತದೆ.

ಆ) ಭಾರತ ಸರ್ಕಾರದ ಮಾರ್ಗ ಸೂಚಿಯಂ ಪ್ರಕಾರ ಳ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ, ಅಥವಾ ೧,೦೦,೦೦೦ ಜನಸಂಖ್ಯೆಗೆ ಒಂದು, ತಾಲ್ಲೂಕು ಮಟ್ಟದ ಆಸ್ಪತ್ರೆ ಸಮುದಾಯ ಆರೋಗ್ಯ ಕೇಂದ್ರವನ್ನು ಸ್ಥಾಪಿಸಲಾಗುವುದು. ಮತ್ತು ಸರ್ಕಾರದ ನಾರ್ಮ್ಸ್ ಪ್ರಕಾರ ೩೦–೫೦ ಹಾಸಿಗೆಗಳಿಗೆ ಬೇಕಾದ ಹೆಚ್ಚಿನ ಸಿಬ್ಬಂದಿಗಳನ್ನು ಒದಗಿಸಲಾಗುವುದು. ಈ ಪ್ರಕಾರ ಸಾಧ್ಯವಾದಷ್ಟು ಪಾಲಿಸ ಲಾಗುತ್ತಿದೆ.

ಇ) ಬಂದಿದೆ.

ಈ) ಈ ಬಗ್ಗೆ ಮಾಹಿತಿಯಿಲ್ಲ.

ಉ) ಈ ಪ್ರಾಥಮಿಕ ಆರೋಗ್ಯ ಘಟಕವನ್ನು ೫೦ ಹಾಸಿಗೆಗಳ ಸಾರ್ವಜನಿಕ ಆಸ್ಪತ್ರೆಯಾಗಿ ಮೇಲ್ದರ್ಜೆಗೇರಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ.

ಊ) ಯೋಜನೆಯು ಅಡಿಯಲ್ಲಿ ಹಣದ ಕೊರತೆ ಇರುವುದರಿಂದ.

ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ

೨೩೩. ಶ್ರೀ ಗೋಪಾಲ ಮಂಕಂದ ಕಾನಡೆ (ಸಿರ್ಸಿ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳ ಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸ್ವಾತಂತ್ರ್ಯ ಹೋರಾಟಗಾರನೆಂದು ಪರಿಗಣಿಸಲು ಸರ್ಕಾರದವರು ಹಾಕಿ ಕೊಂಡಿರುವ ನಿಯಮಗಳೇನು (ನಿಯಮಗಳ ಪ್ರತಿ ಒದಗಿಸುವುದು)

ಆ) ಸರ್ಕಾರದವರು ಸ್ವಾತಂತ್ರ್ಯ ಹೋರಾಟಗಾರರಿಗೆ ಕೊಡುತ್ತಿರುವ ವಿಶ್ರಾಂತಿ ವೇತನವೆಷ್ಟು

ಇ) ರಾಜ್ಯದ ಸ್ವಾತಂತ್ರ್ಯ ಹೋರಾಟಗಾರರ ಒಟ್ಟಿನ ಸಂಖ್ಯೆ, ಎಷ್ಟು (ಜಿಲ್ಲಾವಾರು ವಿವರ ಒದಗಿಸುವುದು)

ಈ) ಶಿವಮೊಗ್ಗ ಜಿಲ್ಲೆ ಚನ್ನಗಿರಿ ತಾಲ್ಲೂಕಿನಲ್ಲಿ ಸ್ವಾತಂತ್ರ್ಯ ಹೋರಾಟಗಾರರೆಂದು ಸರ್ಕಾರ ದಿಂದ ವಿಶ್ರಾಂತಿ ವೇತನ ಪಡೆಯುತ್ತಿರುವವರ ಸಂಖ್ಯೆ ಎಷ್ಟು

ಉ) ಸದರಿ ತಾಲ್ಲೂಕಿನಲ್ಲಿ ಸ್ವಾತಂತ್ರ್ಯ ಸಿಕ್ಕ ನಂತರ ಹುಟ್ಟಿದವರು ಸ್ವಾತಂತ್ರ್ಯ ಹೋರಾಟ ಗಾರರೆಂದು ವೇತನ ಪಡೆಯುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ

ಊ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಯವರು).—

ಅ) ಅನುಬಂಧ (ಅ) ದಲ್ಲಿ ತೋರಿಸಲಾಗಿದೆ

ಆ) ಮಾಹೆಯಾನ ರೂ. ೨೦೦–೦೦ ರಂತೆ

ಇ) ೧೮೨೨೫ ಜಿಲ್ಲಾವಾರು ವಿವರಗಳನ್ನು ಅನುಬಂಧ (ಅ) ದಲ್ಲಿ ಒದಗಿಸಲಾಗಿದೆ

ಈ) ೨೭೨

ಉ) ಇಲ್ಲ

ಊ) ಉದ್ಭವಿಸುವುದಿಲ್ಲ.

ಅನುಬಂಧ

(ಪ್ರಶ್ನೆ 'ಅ' ಗೆ ಉತ್ತರಗಳು)

ಈ ಕೆಳಕಂಡ ವರ್ಗಗಳಿಗೆ ಸೇರಿದ ಸ್ವಾತಂತ್ರ್ಯ ಯೋಧರು ಅಗತ್ಯವಿರುವ ದಾಖಲೆಗಳನ್ನು: ಸಾಕ್ಷ್ಯಾಧಾರಗಳನ್ನು ಒದಗಿಸಿದರೆ ರಾಜ್ಯ ಗೌರವಧನ ಪಡೆಯುವುದಕ್ಕೆ ಅರ್ಹರಾಗಿರುತ್ತಾರೆ.